



ಹಿಮ ಕರಗಲು ಆರಂಭವಾಗಿತ್ತಷ್ಟೇ! 'ಸ್ಟೇಟ್ ಡಿಸಾಸ್ಟರ್ ರೆಸ್ಪೋನ್ಸ್ ಫೋರ್ಸ್'ನವರು ಆ ಹಿಮರಾಶಿಯನ್ನು ಕಡಿದು ನಮಗೆ ದಾರಿ ಮಾಡಿಕೊಡುತ್ತಿದ್ದರು. ಕೆಲವೆಡೆ ದಾರಿಯೇ ಇರಲಿಲ್ಲ! ಕೆಲವೆಡೆ, ಹಿಮದ ಮೇಲ್ಮೈ ಗಟ್ಟಿಯಾಗಿ ಕಂಡರೂ, ಕಾಲಿಟ್ಟ ಕೂಡಲೇ ಕಾಲು ಒಳಗೆ ಸಿಲುಕಿಕೊಳ್ಳುತ್ತಿತ್ತು. ಉಲ್ಲನ್ ಟೋಪಿ, ಗ್ಲೌಸು, ಥರ್ಮಲ್ಸ್, ಸ್ವೆಟರ್, ಸಾಕ್ಸ್, ಶೂ ಇವೆಲ್ಲ ಇದ್ದರೂ ಚಳಿ ಹಾಗೂ ಶೀತಗಾಳಿಯನ್ನು ತಡೆಯುವುದು ಅಸಾಧ್ಯವಾಗಿತ್ತು. ಒಮ್ಮೆಲೇ ಮಳೆಗಾಳಿ ಶುರುವಾಗಿ ಅನಿಶ್ಚಿತ ವಾತಾವರಣದಿಂದ ದಿಕ್ಕೆಡುವಂತಾಗುತ್ತಿತ್ತು. ಪರ್ವತದ ಮೇಲೆ ಹೋದಂತೆಲ್ಲ ಮಂಜು ಕವಿದು, ಮುಂದಿನದ್ದೇನು ಕಾಣದಂತಾಗುತ್ತಿತ್ತು.

2013ರ ಕೇದಾರ ಜಲಪ್ರಳಯದ ಮೊದಲು ದಾರಿಯುದ್ದಕ್ಕೂ ಅಂಗಡಿಗಳೂ, ತಂಗುದಾಣಗಳೂ ಇದ್ದವಂತೆ. ಈಗ, ಎರಡೋ ಮೂರೋ ಕಿ.ಮೀ.ಗಳ ಮಧ್ಯೆ ಒಂದೆರಡು ಅಂಗಡಿಗಳು, ಹೊಸದಾಗಿ ನಿರ್ಮಿಸುತ್ತಿರುವ ತಂಗುದಾಣಗಳೂ ಕಾಣಸಿಗುತ್ತವೆ. ಭಯಾನಕ ಪ್ರಪಾತ; ನಡುವಿನ 56 ಅಡಿಯ ಕಲ್ಲಿನ ರಸ್ತೆಯಲ್ಲಿ ಕುದುರೆ, ಹೇಸರಕತ್ತೆಗಳ, ಪಿಟ್ಟೂ, ಡೋಲೀವಾಲಾಗಳ, ಏರುವ ಇಳಿಯುವ ಜನರ ಓಡಾಟ; ಸ್ವಲ್ಪ ಎಚ್ಚರತಪ್ಪಿ ಹೆಜ್ಜೆ ಇರಿಸಿದರೂ ಕಾಣದ ಜಾಗಕ್ಕೆ ನಮ್ಮ ಪಯಣ ನಿಶ್ಚಿತ.

ಪರ್ವತವನ್ನೇರುವಾಗ ನಮ್ಮ ಜೊತೆಜೊತೆಯೇ ನಡೆದು ಬಂದವನು ಜೊಗೋತ್‌ಶಾಹಿ ಎಂಬ ತರುಣ ನೇಪಾಳಿ ಪಿಟ್ಟೂವಾಲಾ. ನಮ್ಮ ದೇಹವೇ ನಮಗೆ ಭಾರವೆನ್ನಿಸುವ ಆ ಪರ್ವತಾರೋಹಣದಲ್ಲಿ, ತನ್ನ ಬೆನ್ನ ಹಿಂದೆ ಪಿಟ್ಟು ಎಂದು ಕರೆಯಲಾಗುವ ಬಿದಿರಿನ ಬುಟ್ಟಿಯಲ್ಲಿ 60–70 ಕೆ.ಜಿ ತೂಗುವ ವ್ಯಕ್ತಿಯನ್ನು ಕುಳ್ಳಿರಿಸಿಕೊಂಡು ಆ ಬೆಟ್ಟವನ್ನೇರುವ ಜೊಗೊತ್ ತರಹದವರು ದಾರಿಯುದ್ದಕ್ಕೂ ನಮಗೆ ಕಾಣಸಿಗುತ್ತಾರೆ. ಇದಕ್ಕೆ ಅವರು 1500ರಿಂದ 2000 ರೂಪಾಯಿವರೆಗೆ ಶುಲ್ಕ ವಿಧಿಸುತ್ತಾರೆ.

ಗಿರಿಶ್ರೇಣಿಗಳನ್ನು ಏರಿಳಿಯುತ್ತ ಆಯಾಸದಿಂದ ಹೈರಾಣಾಗಿದ್ದ ನಮ್ಮನ್ನು, ಆ ಶ್ರಮಿಕರ ಉತ್ಸಾಹ ಮತ್ತು ದೈಹಿಕ ಶ್ರಮವು ಉತ್ತೇಜಿಸುತ್ತ ಶಿಖರದೆಡೆಗೆ ಮತ್ತೆ ಮುನ್ನಡೆಯುವಂತೆ ಮಾಡುತ್ತಿತ್ತು. ಕೇದಾರದ 18 ಕಿ.ಮೀ.ಗಳ ಮಾರ್ಗ ಮಧ್ಯೆ ಅಲ್ಲಲ್ಲಿ ಇವರು ಕುಳಿತಿರುತ್ತಾರೆ. ಕಾಲ್ನಡಿಗೆಯಲ್ಲಿ ತೊಡಗಿದ ಯಾತ್ರಿಕರು ನಮಗಿನ್ನು ಏರಲು ಸಾಧ್ಯವೇ ಇಲ್ಲ ಎಂದು ಕೈಚೆಲ್ಲುವ ಸ್ಥಿತಿಯಲ್ಲಿದ್ದಾಗ, ಮರಳುಗಾಡಿನ ಓಯಸಿಸ್‌ನಂತೆ, ಇವರು ನೆರವಿಗೆ ಧಾವಿಸಿ ಬರುತ್ತಾರೆ.

ಜೊಗೋತ್ ತಿಳಿಸಿದ ಪ್ರಕಾರ ಪಿಟ್ಟೂವಾಲಾಗಳು ಹೆಚ್ಚಾಗಿ ನೇಪಾಳಿಗಳೇ ಆಗಿದ್ದು, ಕುದುರೆ, ಹೇಸರಕತ್ತೆ ಮಾಲೀಕರು ಹಾಗೂ ಡೋಲೀವಾಲಾಗಳೆಲ್ಲ ಸ್ಥಳೀಯ ಗಡವಾಲೀ ಜನರು. ವರ್ಷದ ಆರು ತಿಂಗಳು ಅಂದರೆ ಏಪ್ರಿಲ್–ಮೇ ತಿಂಗಳಿನಿಂದ ಸೆಪ್ಟೆಂಬರ್–ಅಕ್ಟೋಬರ್‌ವರೆಗೆ ಮಾತ್ರ ಇವರಿಗೆ ಈ ಕೆಲಸ. ಕೇದಾರ ಕಣಿವೆಯ ಈ ಎಲ್ಲ ಶ್ರಮಜೀವಿಗಳೂ ಚಾರ್‌ಧಾಮ್ ಯಾತ್ರೆಯ ಈ ದಿನಗಳನ್ನೇ ಕಾತರದಿಂದ ಕಾಯುತ್ತಿರುತ್ತಾರೆ. ಅದು ಅವರ ಗಳಿಕೆಯ ಸಮಯ. ದಿನಕ್ಕೆ 32ರಿಂದ 64 ಕಿ.ಮಿ. ಕ್ರಮಿಸುತ್ತ ಯಾತ್ರಿಕರಿಗೂ ನೆರವಾಗುತ್ತ ತಮ್ಮ ಕುಟುಂಬಕ್ಕೆ ಆಸರೆಯಾಗುತ್ತಾರೆ. ಉಳಿದ 6 ತಿಂಗಳು ರಸ್ತೆಯ ಕೆಲಸ, ಕಟ್ಟಡ ಕಾಮಗಾರಿಯಿಂದ ಅವರ ಜೀವನ ಸಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಯಾತ್ರಾರ್ಥಿಗಳು ಕೇದಾರನಾಥನ ದರ್ಶನಕ್ಕೆ ಹೆಲಿಕಾಪ್ಟರ್ ಸೇವೆಯನ್ನು ಬಳಸಿಕೊಳ್ಳುತ್ತಿರುವ ಹೆಚ್ಚಾಗುತ್ತಿರುವುದು ತಮ್ಮ ಈ ಕಾಯಕಕ್ಕೆ ದೊಡ್ಡ ಪೆಟ್ಟು ಅನ್ನುವುದು ಜೋಗೋತ್ ಅಳಲು.

ಪ್ರತಿದಿನವೂ ಒಂದು ಬಾರಿಯಾದರೂ (ಕೆಲವೊಮ್ಮೆ ಎರಡೆರಡು ಬಾರಿ) ಪ್ರವಾಸೀ ಯಾತ್ರಾರ್ಥಿಗಳನ್ನು, ಅವರ ಲಗ್ಗೇಜಿನ ಸಹಿತವಾಗಿ ಹೊತ್ತುಕೊಂಡು ಜ್ಯೋತಿರ್ಲಿಂಗ ದರ್ಶನ ಮಾಡಿಸಿ ಮತ್ತೆ ಸುರಕ್ಷಿತವಾಗಿ ಕೆಳಗಿಳಿಸಿ ತರುವ ಕುದುರೆ, ಹೇಸರಗತ್ತೆಗಳ, ಅವುಗಳ ಮಾಲೀಕರ, ಪಾಲ್ಕೀವಾಲಾ, ಪಿಟ್ಟೂವಾಲಾಗಳ ಕಾಯಕ ಅನನ್ಯವಾದುದು.

2013ರ ಜಲಪ್ರಳಯದ ನಂತರ ಕೇದಾರದ ರಸ್ತೆಯ ಮಾರ್ಗದ ಪುನರ್ನಿರ್ಮಾಣ ಕಾರ್ಯದಲ್ಲಿ ನಿರತರಾಗಿರುವ ಕಾರ್ಮಿಕರ ಶ್ರಮವೂ ಸ್ಮರಣೀಯ. ಯಾತ್ರಿಕರ ಅನುಕೂಲಕ್ಕಾಗಿ, ಮಾರ್ಗ ಮಧ್ಯೆ ಹಾಗೂ ದೇಗುಲದ ಸುತ್ತಮುತ್ತ ನಿರ್ಮಾಣಗೊಳ್ಳುತ್ತಿರುವ ತಂಗುದಾಣಗಳು, ವಿದ್ಯುದ್ದೀಪಗಳ ಕಂಬಗಳಿಗಾಗಿ ಭಾರೀ ಗಾತ್ರದ ಲೋಹದ ವಸ್ತುಗಳನ್ನು ಹಾಗೂ ನೀರಿನ ಟ್ಯಾಂಕುಗಳನ್ನು ಹೊತ್ತು ಮೇಲಕ್ಕೆ ಸಾಗಿಸುವ ಅವರ ಪರಿಶ್ರಮಕ್ಕೆ ಸರಿಸಾಟಿಯೇ ಇಲ್ಲ.